ವಿಷಯ: ಪ್ರಥಮ ದರ್ಜೆ ಮತ್ತು ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳಿಗೆ ನೇಮಕಾತಿ.

2796 (4114)

ಶ್ರೀ ಆಯನೂರು ಮಂಜುನಾಥ್ (ಹೊಸನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಗಳನ್ನು ಭರ್ತಿ ಮಾಡಲು ಯಾವಾಗ ಜಾಹೀರಾತು ನೀಡಲಾಗಿತ್ತು?

ಆ) ಎಷ್ಟೆಷ್ಟು ಹುದ್ದೆಗಳಿಗೆ ಜಾಹೀರಾತು ನೀಡಲಾಗಿತ್ತು? ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿತ್ತು?

ಇ) ಈಗಾಗಲೇ ಹಲವಾರು ವರ್ಷಗಳಿಂದ ಜಾಹಿರಾತು ನೀಡದೆ ನೇಮಕಾತಿ ಆಗದೇ ಇರುವುದರಿಂದ ವಯೋಮಿತ ಮೀರಿರುವ ಸಾವಿರಾರು ಯುವಕರು ನಿರುದ್ಯೋಗಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಯಾವಾಗ ನೇಮಕಾತಿ ಮಾಡಿಕೊಳ್ಳಲಾಗುವುದು; ನೇಮಕಾತಿ ಮಾಡುವಾಗ ಕನಷ್ಠ ಹತ್ತು ವರ್ಷ ವಯೋಮಿತಿ ಸಡಿಲಿಕೆ ನೀಡಲಾಗುವುದೇ?

ಶ್ರೀ ಜೆ.ಹೆಚ್.ಪಟೀಲ್ (ಮುಖ್ಯ ಮಂತ್ರಿಗಳು):

ಅ) ದಿನಾಂಕ 3-10-96 ರಂದು ಜಾಹಿರಾತು ನೀಡಿದೆ.

ಆ) ಪ್ರಥಮ ದರ್ಜೆ ಸಹಾಯಕ 966 ಹಾಗೂ ದ್ವಿತೀಯ ದರ್ಜೆ ಸಹಾಯಕರ 1030 ಹೀಗೆ ಒಟ್ಟು 1,996 ಹುದ್ದೆಗಳನ್ನು ತುಂಬಲು ಜಾಹೀರಾತು ನೀಡಲಾಗಿದೆ. ಈ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಆರಂಭವಾಗಿದೆ.

ಇ) ಹೌದು.

ಈ) ಪ್ರಥಮ ದರ್ಜೆ ಸಹಾಯಕ ಹುದ್ದೆಗಳಿಗೆ ಲಿಖಿತ ಪರೀಕ್ಷೆಯನ್ನು 1997ರ ಅಕ್ಟೋಬರ್: ನವೆಂಬರ್ ತಿಂಗಳಲ್ಲಿ ಹಾಗೂ ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಿಗೆ 1998ರ ಜನವರಿ: ಫೆಬ್ರವರಿ ತಿಂಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಇತ್ತೀಚೆಗೆ ತಾನೇ ಜಾಹೀರಾತು ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು. ಈ ಬಗ್ಗೆ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ. ಈ ಹಂತದಲ್ಲಿ ಹುದ್ದೆಗಳ ನೇಮಕಾತಿಗಾಗಿ ವಯೋಮಿತಿ ಸಡಲಿಕೆ ಬಗ್ಗೆ ಯಾವುದೇ ಕ್ರಮ ಕೈಗೊಂಡಲ್ಲಿ ಅದರಿಂದ ಈಗಾಗಲೇ ಪ್ರಾರಂಭವಾಗಿರುವ ಆಯ್ಕೆ: ನೇಮಕಾತಿ ಪ್ರಕ್ರಿಯೆಯು ವಿಳಂಬವಾಗುವುದು.